**ಓ ಎಸ್ ನಂಃ 167-15** **ಪಿಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕಃ 09.03.2020 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ ಎಸ್ ಬಿ ವಕೀಲರಿಂದ ಪ್ರತಿವಾದಿಗಳ ಪರವಾಗಿಃ-**

.14.. ನಿಪಿ.96 ನ್ನು ಹಾಜರಪಡಿಸಿದ್ದೀರಿ ಅದನ್ನು ಯಾವ ಉದ್ದೇಶಕ್ಕಾಗಿ ಹಾಜರಪಡಿಸಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿದಾರಳು, ಸದರಿ ದಾಖಲೆಯನ್ನು ತೋರಿಸಿದರೆ ನೋಡಿ ಹೇಳುತ್ತೇನೆಂದು ನುಡಿಯುತ್ತಾಳೆ. ನಾನು ಹಾಜರಪಡಿಸಿರುವ ದಾಖಲೆಗಳ ಪೈಕಿ ಕೆಲವು ನನಗೆ ಗೊತ್ತಿವೆ, ಕೆಲವು ನನಗೆ ಗೊತ್ತಿಲ್ಲ. ನನಗೆ ಸಾಕ್ಷಿ ಹೇಳಲು ಬರುವ ಮೊದಲು ದಾಖಲೆಗಳ ಬಗ್ಗೆ ತಿಳಿದುಕೊಂಡಿದ್ದೇನೆ, ಇನ್ನು ಕೆಲವು ದಾಖಲೆಗಳ ಬಗ್ಗೆ ನನಗೆ ತಿಳಿಯುವುದಿಲ್ಲ.

..15.. ನಿಪಿ.106 1987 ರಲ್ಲಿ ದೃಢೀಕರಣವಾಗಿದೆ ಎಂದರೆ ಸರಿ. ನನ್ನ ಮದುವೆಯಾಗಿ ಅಂದಾಜು 40 ವರ್ಷಗಳಾಗಿವೆ. ನನಗೆ ಅಂದಾಜು 14 ವರ್ಷಗಳು ಇರುವಾಗ ಮದುವೆಯಾಗಿದೆ. ನಾನು 8 ನೇ ತರಗತಿ ಪಾಸಾಗಿ 9 ನೇ ತರಗತಿಗೆ ಇನ್ನೂ ಪ್ರವೇಶ ಸಿಕ್ಕಿರಲಿಲ್ಲ, ಆಗಲೇ ಮದುವೆಯಾಗಿದೆ. ಈ ಎರಡು ಆಸ್ತಿಗಳನ್ನು ಹೊರತುಪಡಿಸಿದರೆ ಉಳಿದ ಆಸ್ತಿಗಳು ಅವರ ಅವರ ಹೆಸರಿನಲ್ಲಿದ್ದವು ಎಂದರೆ ಸರಿಯಲ್ಲ. ನನ್ನ ಮಾವನ ಹೆಸರಿನಲ್ಲಿ ಉಳಿದ ಜಮೀನುಗಳು ಸಹ ಇದ್ದವು ಅಂತಾ ತೋರಿಸಲು ಯಾವ ದಾಖಲೆಗಳನ್ನು ಹಾಜರಪಡಿಸಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿದಾರಳು, ನನ್ನ ಮಾವ ದುಡಿದು, ತನ್ನ ಮಕ್ಕಳ ಹೆಸರಿನಲ್ಲಿ ಹಿಡಿದಿದ್ದ ಸದರಿ ದಾಖಲೆಗಳನ್ನು ಹಾಜರಪಡಿಸಿದ್ದೇವೆ. ನನ್ನ ಮಾವನ ಹೆಸರಿನಲ್ಲಿ ಈ ಜಮೀನುಗಳು ಇದ್ದವು ಅಂತಾ ತೋರಿಸಲು ಯಾವುದೇ ದಾಖಲೆಗಳನ್ನು ಹಾಜರಪಡಿಸಬೇಕಿರುವ ಬಗ್ಗೆ ತನಗೆ ನೆನಪಿಲ್ಲವೆಂದು ನುಡಿಯುತ್ತಾಳೆ. ನಾನು ನ್ಯಾಯಾಲಯಕ್ಕೆ ಹಾಜರಪಡಿಸಿರುವ ದಾಖಲೆಗಳನ್ನು ನೋಡಿದ್ದೇನೆ.

..16.. ಬ್ಲಾಕ ನಂಃ 75 ಈ ಆಸ್ತಿಗೆ ಸಂಬಂಧಪಟ್ಟಂತೆ ಅದರ ಮೇಲೆ ಸಾಲ ತೆಗೆದುಕೊಳ್ಳುವುದು- ಸಾಲ ತುಂಬುವುದು ಮಾಡಲಾಗಿದೆ ಎಂದರೆ ಸರಿ. ನಾನು ಹಾಜರಪಡಿಸಿರುವ ದಾಖಲೆಗಳ ಪ್ರಕಾರ ಎಲ್ಲಾ ವ್ಯವಹಾರಗಳು ಎರಡನೇ ಪ್ರತಿವಾದಿ ಹೆಸರಿನಲ್ಲಿ ಆಗಿವೆ ಎಂದರೆ ಸರಿಯಲ್ಲ. ಈ ಜಮೀನಿಗೆ ಸಂಬಂಧಪಟ್ಟಂತೆ ನನ್ನ ಗಂಡನ ಹೆಸರಿನಲ್ಲಾಗಲಿ ಅಥವಾ 3 ನೇ ಪ್ರತಿವಾದಿ ಹೆಸರಿನಲ್ಲಾಗಲಿ ಯಾವುದೇ ದಾಖಲೆ ಇಲ್ಲವೆಂಬ ಸಲಹೆಗೆ, ತನಗೆ ನೆನಪಿಲ್ಲವೆಂದು ನುಡಿಯುತ್ತಾಳೆ. ನಿಪಿ.21 ನ್ನು ತೋರಿಸಿ ಕೇಳಲಾಗಿ ಅದು 2 ನೇ ಪ್ರತಿವಾದಿ ಹೆಸರಿನಲ್ಲಿ ಮಾತ್ರ ಖಾತೆ ಇರುವುದನ್ನು ಒಪ್ಪಿಕೊಳ್ಳುತ್ತಾಳೆ, ಆದರೆ ಸ್ವತಃ ಇದನ್ನು ಮೋಸ ಮಾಡಿಕೊಂಡು ಹಚ್ಚಿಸಿಕೊಂಡಿರುತ್ತಾರೆಂದು ನುಡಿಯುತ್ತಾಳೆ.

ಇದು ನನ್ನ ಮಾವ ಜೀವಂತ ಇರುವಾಗ ದೃಢೀಕರಣವಾಗಿದೆ ಎಂದರೆ ಸರಿ, ಸಾಕ್ಷಿ ಪುನಃ ಎರಡನೇ ಪ್ರತಿವಾದಿ ತನ್ನ ತಂದೆಗೂ ಮೋಸ ಮಾಡಿದ್ದಾನೆ. ನಿಪಿ.67 ನ್ನು ಓದಿ ಹೇಳಿ, ಸದರಿ ದಾಖಲೆ ಪ್ರಕಾರ ವಾಟ್ನಿ ವರದಿಯಂತೆ ಎರಡನೇ ಪ್ರತಿವಾದಿಗೆ 1959 ರಲ್ಲಿ ಆತ ಅಲ್ಪವಯಿ ಇದ್ದ ಅಂತಾ ಮಾಡಿದ ಸಲಹೆಗೆ, ಸಾಕ್ಷಿದಾರಳು ಒಪ್ಪಿಕೊಳ್ಳುತ್ತಾಳೆ. ಈ ರೀತಿ ಮೋಸ ಮಾಡಿರುತ್ತಾನೆ ಅಂತಾ ಹೇಳಿಕೊಂಡು ಎರಡನೇ ಪ್ರತಿವಾದಿ ವಿರುದ್ಧ ಈ ದಾವಾ ಹೊರತುಪಡಿಸಿ ಇಲ್ಲಿಯವರೆಗೂ ಬೇರೆ ಯಾವುದೇ ಕ್ರಮ ಕೈಗೊಂಡಿಲ್ಲ. ಎರಡನೇ ಪ್ರತಿವಾದಿ ವಿರುದ್ಧ ನನ್ನ ಮಾವನಾಗಲಿ, ಮೂರನೇ ಪ್ರತಿವಾದಿಯಾಗಲಿ, ಸದರಿ ಡ-ಆದೇಶ ಪ್ರಶ್ನೆ ಮಾಡಿ, ಯಾವುದೇ ಕ್ರಮಕೈಗೊಂಡಿಲ್ಲವೆಂದರೆ ಸರಿ.

..17.. ಮೂರನೇ ಪ್ರತಿವಾದಿ ಹೆಸರಿನಲ್ಲಿ ಜಮೀನಗಳಿದ್ದು, ಅದರ ಮೇಲೆ ಆತ ಸಾಲ ತೆಗೆದುಕೊಂಡು ಅದನ್ನು ಮರುಪಾವತಿ ಮಾಡಿದ್ದಾನೆಂದರೆ, ಮೊದಲಿಗೆ ನೆನಪಿಲ್ಲವೆಂದು ಹೇಳಿ, ನಂತರ ಸುಳ್ಳು ಎಂದು ನುಡಿಯುತ್ತಾಳೆ.

ಪ್ರಶ್ನೆಃ- ನೀವು ಹಾಜರಪಡಿಸಿರುವ ದಾಖಲೆಗಳು ಸುಳ್ಳೋ ಅಥವಾ ನೀವು ಕೊಟ್ಟ ಉತ್ತರ ಸುಳ್ಳೋ?

ಉತ್ತರಃ- ನನಗೆ ಮೋಸ ಮಾಡಿರುತ್ತಾರೆಂದು ನುಡಿಯುತ್ತಾಳೆ.

..18.. ಯಾರ ಹೆಸರಿನಲ್ಲಿ ಆಸ್ತಿಗಳು ಇರುತ್ತವೆಯೋ ಅವರಿಗೆ ಸಾಲ ಮಂಜೂರು ಮಾಡುತ್ತಾರೆಂದರೆ ಸರಿ.

**ಈ ಹಂತದಲ್ಲಿ ಕೋರಿಕೆಯ ಮೇರೆಗೆ ಪಾಟಿ ಸವಾಲಿಗಾಗಿ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**